APPLICATIONS PENDING DISPOSAL IN S.C.S.T. HOUSE BUILDING CORPORATION IN CHICKMAGALUR DISTRICT

Sri G. PUTTASWAMY (Mudigere).—

32. (57) Will the Minister for Co-operation be pleased to state :—

(a) the number of House building loan applications pending sanction in the Office of the SCs and STs House Building Corporation in Chickmagalur District ;

(b) the steps taken to dispose of such applications ?

Sri A. SHANKARA ALVA (Minister for Co-operation).—

(a) There is no SC and ST House Building Corporation for Chickmagalur District. 68 loan applications of Chickmagalur are pending sanction with the SC and ST Co-operative Housing Corporation, Bangalore.

(b) The applications will be considered for sanction after getting fresh allotment of funds by the Housing Corporation.

ಮೂಡಿಗೆರೆ ತಾಲ್ಲೂಕಿನಲ್ಲಿ, ಕೊಟ್ಟಿಗೆಹಾಳ್–ಕಳಸ ರೋಡಿನಲ್ಲಿರುವ ದೊಡ್ಡ ಸೇತುವೆಯನ್ನು ಸರಿಪಡಿಸುವುದು.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ) :—

೩೩. (೫೯) :—ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಮೂಡಿಗೆರೆ ತಾಲ್ಲೂಕಿನ ಕೆಳಗೂರು ಗ್ರಾಮದ ಕೆಳಗೂರು ಟಿ. ಎಸ್ಟೇಟ್ ಹತ್ತಿರವಿರುವ ಕೊಟ್ಟಿಗೆಹಾಳ್–ಕಳಸ ರೋಡಿನಲ್ಲಿರುವ ದೊಡ್ಡ ಸೇತುವೆಯೊಂದು ನಾದುರಸ್ತಾಗಿ (ಶಿಥಿಲವಾಗಿ) ಬಿದ್ದುಹೋಗುವ ಸ್ಥಿತಿಯಲ್ಲಿದ್ದು ಪ್ರಯಾಣಿಕರ ಸಂಚಾರಕ್ಕೆ ಅಡ್ಡಿಯಾಗಬಹುದೆಂಬುದರ ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಾದರೆ ಈ ಸೇತುವೆಯನ್ನು ಸರಿಪಡಿಸುವ ಬಗ್ಗೆ ಸರಕಾರದವರು ಏನು ಕ್ರಮ ಕೈಗೊಳ್ಳಲುದ್ದೇಶಿಸಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ. (ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು) :—

ಉತ್ತರ :—(ಅ) ಬಂದಿದೆ.

(ಆ) 1973–74 ಸಾಲಿನ ಅಂದಾಜು ಪಟ್ಟಿಯಲ್ಲಿ ಸೇರಿಸಲು ಪರಿಶೀಲಿಸಲಾಗುತ್ತಿದೆ.